
## ವರ್ಷದಿಂದ ವರ್ಷಕ್ಕೆ ಪ್ರಕರಣಗಳ ಸಂಖ್ಯೆ




ಸೈಬರ್ ಅಪರಾಧ ಪ್ರಕರಣಗಳ ಕುರಿತು ಹೆಚ್ಚಿನ ಮಟ್ಟದಲ್ಲಿ ಜಾಗೃತಿ ಮೂಡಿಸಿದ್ದರಿಂದ 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ವಂಚಿಸುತ್ತಿದ್ದ ಪ್ರಕರಣಗಳು ಕೊಂಚ ತಗ್ಗಿದ್ದವು. ಕಳೆದ ಆರು ತಿಂಗಳಿಂದ ಮತ್ತೆ ಅದೇ ರೀತಿಯ ವಂಚನೆ ಪ್ರಕರಣಗಳು ಹೆಚ್ಚು ವರದಿ ಆಗುತ್ತಿವೆ. 'ಡಿಜಿಟಿಲ್ ಅರೆಸ್ಟ್' ಎಂಬುದು ಇಲ್ಲ. ಈ ರೀತಿ ವಂಚಿಸಲು ಪ್ರಯತ್ನಿಸಿದರೆ ರಾಷ್ಟ್ರೀಯ ಸೈಬರ್ ಸಹಾಯವಾಣಿ 1930 ಅಥವಾ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡಬಹುದು.

—ಸಿ. ವಂಶಿಕೃಷ್ಣ,
ಹೆಚ್ಚುವರಿ ಪೊಲೀಸ್ ಕಮಿಷನರ್, ಪಶ್ಚಿಮ ವಿಭಾಗ



'ಪ್ರಜಾವಾಣಿ' ಅಂಕಣಕಾರ ನಾಗೇಶ ಹೆಗಡೆ ಅವರಿಗೆ ಆದ ಡಿಜಿಟಲ್ ಅರೆಸ್ಟ್ ಪ್ರಕರಣವನ್ನು ಎರಡು ಭಾಗಗಳಲ್ಲಿ ಸುದೀರ್ಘವಾಗಿ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದಾರೆ.

***

ಡಿಜಿಟಲ್ ಅರೆಸ್ಟ್‌ನಲ್ಲಿ ತಾವು ₹1.5 ಕೋಟಿ ಕಳೆದುಕೊಂಡ ಬಗ್ಗೆ ಹರಿಯಾಣದ ವೃದ್ಧ ದಂಪತಿಯೊಬ್ಬರು ಸುಪ್ರೀಂ ಕೋರ್ಟ್‌ಗೆ ಇತ್ತೀಚೆಗೆ ಪತ್ರ ಬರೆದಿದ್ದರು. ಸೆ.1ರಿಂದ ಸೆ.16ರವರೆಗೆ ದಂಪತಿಯನ್ನು 'ಡಿಜಿಟಲ್ ಅರೆಸ್ಟ್'ನಲ್ಲಿ ಇರಿಸಲಾಗಿತ್ತು. ವಂಚಕರು ತಾವು ಸಿಬಿಐ ಮತ್ತು ನ್ಯಾಯಾಲಯದ ಅಧಿಕಾರಿಗಳು ಎಂದು ಹೇಳಿಕೊಂಡಿದ್ದರು. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ನಕಲಿ ಸಹಿ ಇದ್ದ ಸುಳ್ಳು ಆದೇಶ ಪತ್ರವೊಂದನ್ನು ತೋರಿಸಿದ್ದ ವಂಚಕರು, ಹಣ ನೀಡದಿದ್ದರೆ ಬಂಧಿಸಲಾಗುವುದು ಎಂದು ಬೆದರಿಕೆ ಹಾಕಿದ್ದರು ಎಂದೂ ಈ ದಂಪತಿ ದೂರಿನಲ್ಲಿ ಹೇಳಿದ್ದರು.

ಈ ಸಂಬಂಧ ಸುಪ್ರೀಂ ಕೋರ್ಟ್ ಅ.17ರಂದು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ವಿಚಾರಣೆ ಆರಂಭಿಸಿತ್ತು ಮತ್ತು ಈ ಕುರಿತು ಪ್ರತಿಕ್ರಿಯಿಸುವಂತೆ ಕೇಂದ್ರ ಸರ್ಕಾರ ಹಾಗೂ ಸಿಬಿಐಗೆ ನೋಟಿಸ್ ನೀಡಿತ್ತು. ಅಲ್ಲಿಂದ ಡಿಜಿಟಲ್ ಅರೆಸ್ಟ್ ಕುರಿತ ತನಿಖಾ ಪ್ರಕ್ರಿಯೆ ಚುರುಕು ಪಡೆದಿದೆ.

ಹೌದು, ಭಾರತದಲ್ಲಿ ಸಕ್ರಿಯವಾಗಿರುವ 'ಡಿಜಿಟಲ್ ಅರೆಸ್ಟ್' ಎಂಬ ಕಾಲ್ಪನಿಕ ಮತ್ತು ವಂಚಕರೇ ಹುಟ್ಟುಹಾಕಿರುವ ಅಪರಾಧ ಕೃತ್ಯಕ್ಕೆ ಬಹಳಷ್ಟು ಜನರು ಹಣ ಕಳೆದುಕೊಂಡಿದ್ದಾರೆ. ಕೇವಲ ಹಣವಷ್ಟೇ ಅಲ್ಲ, ಅವಮಾನ ಹಾಗೂ ಖಿನ್ನತೆಯಿಂದಲೂ ಬಳಲುತ್ತಿರುವುದು ನವ ಆಧುನಿಕ ಡಿಜಿಟಲ್ ಯುಗದ ಪಿಡುಗಾಗಿದೆ.

ನಿವೃತ್ತಿಯಾಗಿ, ಸಂಧ್ಯಾಕಾಲಕ್ಕೆ ಹಣ ಕೂಡಿಟ್ಟು, ಅದರಲ್ಲೇ ಜೀವನ ನಡೆಸುತ್ತಿರುವವರನ್ನೇ ಗುರಿಯಾಗಿಸಿ ಹೊಸ ಬಗೆಯ ತಂತ್ರಜ್ಞಾನ ಆಧಾರಿತ ಈ ಕೃತ್ಯದಲ್ಲಿ ದೂರದಲ್ಲೆಲ್ಲೋ ಕುಳಿತ ಅಜ್ಞಾನ ವ್ಯಕ್ತಿಯೊಬ್ಬ ಸಮ್ಮೋಹನ, ಬೆದರಿಕೆ ಮತ್ತು ಆತಂಕ ಸೃಷ್ಟಿಸಿ ಹಣ ದೋಚುವ ದೊಡ್ಡ ಮಟ್ಟದ ವಂಚನೆ ಬ್ರಹ್ಮರಾಕ್ಷಸನ ರೂಪ ತಾಳಿದೆ.

ಚಿಕ್ಕಬಳ್ಳಾಪುರದ ಸಂಸದ ಡಾ.ಕೆ.ಸುಧಾಕರ್ ಅವರ ಪತ್ನಿ, ವೈದ್ಯೆ ಪ್ರೀತಿ ಅವರಿಗೆ ಸೈಬರ್ ವಂಚಕರು 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಬೆದರಿಸಿ ₹14 ಲಕ್ಷ ದೋಚಿದ್ದರು. ಇನ್ಫೊಸಿಸ್‌ನ

### 'ಡಿಜಿಟಲ್ ಅರೆಸ್ಟ್' ಅಂದರೆ ಏನು?

ಜಾರಿ ನಿರ್ದೇಶನಾಲಯ, ಎಕ್ಸೈಸ್, ಸಿಬಿಐ, ಆರ್‌ಬಿಐ, ಪೊಲೀಸ್ ಹೀಗೆ ಸರ್ಕಾರದ ವಿವಿಧ ತನಿಖಾ ಸಂಸ್ಥೆಯ ಹೆಸರು, ಸಮವಸ್ತ್ರ, ನಕಲಿ ಆದೇಶ, ಮೊಹರು ಬಳಸಿಕೊಂಡು ವಿಡಿಯೊ ಕರೆ ಮಾಡುವ ವಂಚಕರು, ಗಂಭೀರ ಸ್ವರೂಪದ ಅಪರಾಧ ಕೃತ್ಯದ ನೆಪವೊಡ್ಡಿ ಬೆದರಿಕೆಯೊಡ್ಡುತ್ತಾರೆ. ಕ್ಯಾಮೆರಾದಿಂದ ಅಲ್ಲಾಡದಂತೆ ನೋಡಿಕೊಳ್ಳುವ ಇವರು, ಹಣ ವರ್ಗಾವಣೆ ಮಾಡುವಂತೆ ಸೂಚಿಸುತ್ತಾರೆ. ಇದಕ್ಕಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸುತ್ತಾರೆ. ಅದು ನ್ಯಾಯಾಲಯದ ಆದೇಶವೂ ಆಗಬಹುದು, ಸಿಬಿಐ ಅಥವಾ ಜಾರಿ ನಿರ್ದೇಶನಾಲಯದ ಬಂಧನ ವಾರೆಂಟ್ ಕೂಡಾ ಅಗಿರಬಹುದು. ಹೀಗೆ ಹಂತ ಹಂತವಾಗಿ ಹಣ ವರ್ಗಾಯಿಸಿಕೊಳ್ಳುತ್ತಾರೆ. ಇದಕ್ಕಾಗಿ ಡೀಪ್‌ಫೇಕ್ ವಿಡಿಯೊ, ಧ್ವನಿ ಬದಲಿಸುವ ತಂತ್ರಜ್ಞಾನ ಬಳಕೆ ಮಾಡುತ್ತಾರೆ. ಇಂಥ ವಂಚನೆಗಳು ಕರ್ನಾಟಕ ಮತ್ತು ಬಿಹಾರದಲ್ಲಿ ಅತಿ ಹೆಚ್ಚು ದಾಖಲಾಗಿವೆ.

ಅಕ್ರಮ ಹಣ ವರ್ಗಾವಣೆ, ಮಾದಕ ದ್ರವ್ಯ ಕಳ್ಳಸಾಗಣೆ ಹೀಗೆ ಹಲವು ಗಂಭೀರ ಸ್ವರೂಪದ ಆರೋಪಗಳನ್ನು ಮಾಡಿ ಮಾನಸಿಕವಾಗಿ ಕುಗ್ಗಿಸುವುದು ಮತ್ತು ಅದಕ್ಕಾಗಿ ವೃದ್ಧರನ್ನೇ ಗುರಿಯಾಗಿಸುವುದು ಈ ವಂಚಕರ ಸಂಚು. ಆದರೆ ಹಣ ಇರುವವರ ಮತ್ತು ವಯಸ್ಸಾದವರ ದಾಖಲೆ ಇವರ ಕೈಗೆ ಹೇಗೆ ಸೇರಿತು ಎಂಬುದರ ಜತೆಗೆ, ಡಿಜಿಟಲ್ ದಾಖಲೆಗಳ ಸುರಕ್ಷತೆಯ ಪ್ರಶ್ನೆಯೂ ಮೂಡಿದೆ.

ಆನ್‌ಲೈನ್‌ನಲ್ಲೇ ಜಾಮೀನು ನೀಡುವ ಅಥವಾ ತನಿಖಾ ಶುಲ್ಕ ಭರಿಸುವಂತೆ ಪರದೆ ಆಚೆ ಇರುವ ವ್ಯಕ್ತಿ ಬೆದರಿಸುತ್ತಾನೆ. ಇಲ್ಲಿಂದ ತಪ್ಪಿಸಿಕೊಂಡರೆ ಸಾಕು ಎಂಬಂತೆ ವಂಚನೆಗೊಳಗಾದವರು ಹಣ ನೀಡುತ್ತಲೇ ಇರುತ್ತಾರೆ. ಇದಕ್ಕೆ ಹಣ ಕಳೆದುಕೊಂಡವರೆಷ್ಟೋ... ಹೃದಯಾಘಾತಕ್ಕೆ ಒಳಗಾದವರೂ ಹಲವರಿದ್ದಾರೆ.

ಈ ಕುರಿತು ಜಾಗೃತಿ ಕಾರ್ಯಾಗಾರಗಳು, ಸುದ್ದಿಗಳು ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದ್ದರೂ, ವಂಚಕರ ಜಾಲಕ್ಕೆ ಬಲಿಯಾಗುವವರ ಸಂಖ್ಯೆಯೂ ಬೆಳೆಯುತ್ತಲೇ ಇದೆ.